# ರಾಹುಲ್ ಅಮೇಠಿ ನಾಮಪತ್ರ ಸಿಂಧು

## ಪೌರತ್ವ ವಿವಾದ ಇತ್ಯರ್ಥಪಡಿಸುವ ಅಧಿಕಾರ ಚುನಾವಣಾಧಿಕಾರಿಗೆ ಇಲ್ಲ
## ಶೈಕ್ಷಣಿಕ ಅರ್ಹತೆಗೆ ವಕೀಲರಿಂದ ಸ್ಪಷ್ಟನೆ: ಕೊನೆಗೂ ನಾಮಪತ್ರ ಅಂಗೀಕಾರ

ಕ.ಪ್ರ 23/4/19

• **ಪಿಟಿಐ** ಅಮೇಠಿ

ಪೌರತ್ವ ಹಾಗೂ ಶೈಕ್ಷಣಿಕ ಅರ್ಹತೆಯ ವಿವಾದಕ್ಕೆ ಸಿಲುಕಿದ್ದ ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ಅವರ ನಾಮಪತ್ರ ಕೊನೆಗೂ ಅಂಗೀಕಾರವಾಗಿದೆ. ತನ್ಮೂಲಕ ಸ್ವಕ್ಷೇತ್ರವಾದ ಉತ್ತರ ಪ್ರದೇಶದ ಅಮೇಠಿಯಿಂದ ಅವರು ಲೋಕಸಭೆ ಚುನಾವಣೆಗೆ ಸ್ಪರ್ಧಿಸಲು ಇದ್ದ ಅಡ್ಡಿ ನಿವಾರಣೆಯಾದಂತಾಗಿದೆ.



ರಾಹುಲ್ ಗಾಂಧಿ ಬ್ರಿಟನ್ನಿನ ಪ್ರಜೆ ಮತ್ತು ಅವರು ಶೈಕ್ಷಣಿಕ ಅರ್ಹತೆಯ ಬಗ್ಗೆ ತಪ್ಪು ಮಾಹಿತಿ ನೀಡಿದ್ದಾರೆಂದು ಧ್ರುವ ಲಾಲ್ ಎಂಬ ಪಕ್ಷೇತರ ಅಭ್ಯರ್ಥಿ ಅಮೇಠಿಯ ರಿಟರ್ನಿಂಗ್ ಅಧಿಕಾರಿಗೆ ದೂರು ನೀಡಿದ್ದರು. ಆ ಕುರಿತು ಸೋಮವಾರ ರಾಹುಲ್ ಗಾಂಧಿ ಪರ ವಕೀಲರಿಂದ ಸ್ಪಷ್ಟನೆ ಪಡೆದ ರಿಟರ್ನಿಂಗ್ ಅಧಿಕಾರಿ ರಾಮ ಮನೋಹರ ಮಿಶ್ರಾ, ಅಂತಿಮವಾಗಿ ನಾಮಪತ್ರ ಅಂಗೀಕಾರಗೊಂಡಿದೆ ಎಂದು ಪ್ರಕಟಿಸಿದರು. ಪೌರತ್ವದ ವಿಷಯವನ್ನು ನಿಷ್ಕರ್ಷಿಸುವ ಅಧಿಕಾರ ಚುನಾವಣಾಧಿಕಾರಿಗೆ ಇಲ್ಲ ಎಂಬ ಕಾರಣಕ್ಕೆ ಈ ವಿಷಯವನ್ನು ಚುನಾವಣಾಧಿಕಾರಿ ಗಂಭೀರವಾಗಿ ಪರಿಗಣಿಸಿಲ್ಲ ಎಂದು ಹೇಳಲಾಗಿದೆ.

ರಾಹುಲ್ ಗಾಂಧಿ ಸ್ಪರ್ಧಿಸಿರುವ ಇನ್ನೊಂದು ಕ್ಷೇತ್ರವಾದ ಕೇರಳದ ವಯನಾಡಿನಲ್ಲೂ ಅವರ ವಿರುದ್ಧ ಇದೇ ರೀತಿಯ ದೂರು ದಾಖಲಾಗಿದ್ದು, ಅದಿನ್ನೂ ಬಗೆಹರಿದಿಲ್ಲ.

**ಏನಿದು ಪೌರತ್ವ, ಪದವಿ ವಿವಾದ:** ರಾಹುಲ್ ಗಾಂಧಿ 2004ರಲ್ಲಿ ಬ್ರಿಟನ್ನಿನಲ್ಲಿ ಕಂಪನಿಯೊಂದನ್ನು ಆರಂಭಿಸುವಾಗ ತಾವು ಬ್ರಿಟಿಷ್ ಪ್ರಜೆ ಎಂದು ಹೇಳಿಕೊಂಡಿದ್ದಾರೆ. ಬೇರೆ ದೇಶದ ಪ್ರಜೆ ಭಾರತದಲ್ಲಿ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ಹೀಗಾಗಿ ರಾಹುಲ್‌ರ ಪೌರತ್ವದ ಬಗ್ಗೆ ಗೊಂದಲಗಳಿವೆ. ಬ್ರಿಟನ್ನಿನ ಕಂಪನಿಗೆ ಬಂದಿರಬಹುದಾದ ಲಾಭದ ಬಗ್ಗೆಯೂ ರಾಹುಲ್‌ರ ಅಫಿಡವಿಟ್‌ನಲ್ಲಿ ಉಲ್ಲೇಖವಿಲ್ಲ ಎಂದು ಧ್ರುವ ಲಾಲ್ ಮತ್ತು ಮೂವರು ಇತರರು ತಕರಾರು ಮಾಡಿದ್ದರು. ಜೊತೆಗೆ, ರಾಹುಲ್‌ರ ಶೈಕ್ಷಣಿಕ ಅರ್ಹತೆ ಬಗ್ಗೆಯೂ ಗೊಂದಲಗಳಿವೆ. ತಾವು ಕೇಂಬ್ರಿಜ್ ವಿವಿಯಿಂದ 1995ರಲ್ಲಿ ಎಂ.ಫಿಲ್ ಪದವಿ ಪಡೆದಿರುವುದಾಗಿ ರಾಹುಲ್ ಹೇಳಿಕೊಂಡಿದ್ದಾರೆ. ಆದರೆ, ಸ್ನಾತಕ ಪದವಿ ಪಡೆದಿರುವ ಬಗ್ಗೆ ದಾಖಲೆ ನೀಡಿಲ್ಲ. ಡಿಗ್ರಿ ಪಡೆಯದೆ ಸ್ನಾತಕೋತ್ತರ ಪದವಿ ಪಡೆದಿದ್ದು ಹೇಗೆ ಎಂದು ಪ್ರಶ್ನಿಸಿದ್ದರು. ಈ ಕುರಿತು ವಿವರಣೆ ನೀಡುವಂತೆ ರಾಹುಲ್‌ರ ವಕೀಲ ಕೆ.ಸಿ. ಕೌಶಿಕ್‌ಗೆ ರಿಟರ್ನಿಂಗ್ ಅಧಿಕಾರಿ ಸೂಚಿಸಿದ್ದರು.

ಸೋಮವಾರ ಈ ಕುರಿತು ಚುನಾವಣಾಧಿಕಾರಿಗೆ ವಿವರಣೆ ನೀಡಿದ ನಂತರ ಮಾಧ್ಯಮಗಳ ಜೊತೆ ಮಾತನಾಡಿದ ವಕೀಲ ಕೌಶಿಕ್, ಬ್ರಿಟನ್ನಿನಲ್ಲಿ ರಾಹುಲ್ ಆರಂಭಿಸಿದ್ದ ಕಂಪನಿ 2009ರಲ್ಲಿ ಬಾಗಿಲು ಮುಚ್ಚಿದೆ. ನಾಮಪತ್ರದ ಜೊತೆಗೆ ಕಳೆದ 5 ವರ್ಷದ ತೆರಿಗೆ ವಿವರ ಸಲ್ಲಿಸಿದರೆ ಸಾಕು. ಹಾಗಾಗಿ ಕಳೆದ ಐದು ವರ್ಷದ ವಿವರ ಸಲ್ಲಿಸಿದ್ದೇವೆ. ರಾಹುಲ್‌ರ ಪೌರತ್ವದ ಬಗ್ಗೆ ಎತ್ತಿರುವ ಪ್ರಶ್ನೆಗಳಲ್ಲಿ ಹುರುಳೇ ಇಲ್ಲ ಮತ್ತು ಪೌರತ್ವದ ವಿಷಯವನ್ನು ಸೂಕ್ತ ಪ್ರಾಧಿಕಾರಗಳು ವಿಚಾರಣೆ ನಡೆಸಬೇಕೇ ಹೊರತು ರಿಟರ್ನಿಂಗ್ ಅಧಿಕಾರಿ ನಡೆಸುವಂತಿಲ್ಲ ಎಂದರು.

ಶೈಕ್ಷಣಿಕ ಅರ್ಹತೆಯ ಬಗ್ಗೆ ಎತ್ತಿದ್ದ ಪ್ರಶ್ನೆಗೆ ಪ್ರತಿಯಾಗಿ 1995ರಲ್ಲಿ ರಾಹುಲ್ ಕೇಂಬ್ರಿಜ್ ಯುನಿವರ್ಸಿಟಿಯಿಂದ ಎಂ.ಫಿಲ್ ಪಡೆದಿರುವ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದೇವೆ. ಅದಕ್ಕೂ ಮುನ್ನ 1994ರಲ್ಲಿ ರಾಹುಲ್ ಪದವಿ ಶಿಕ್ಷಣವನ್ನೂ ಪಡೆದಿದ್ದಾರೆ. ಇವೆಲ್ಲವನ್ನೂ ಚುನಾವಣಾಧಿಕಾರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ ಎಂದು ತಿಳಿಸಿದರು.